# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ1/ 407 /17-18 ದಿನಾಂಕ 02.08.2017.

## ಪ್ರಕಟಣೆ

ವಿಷಯ : ಮೇಲ್ವಿಚಾರಕ, ದರ್ಜೆ-3 ಆಂತರಿಕ ಹಾಗೂ ನೇರ ಹುದ್ದೆಗಳ ಆನ್-ಲೈನ್ ಪರೀಕ್ಷೆ ನಡೆಸುವ ಕುರಿತು.

ಉಲ್ಲೇಖ : ಜಾಹೀರಾತು ಸಂ. 3/2016, 4/2016 ದಿನಾಂಕ 11-01-2016.

***

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಉಲ್ಲೇಖಿತ ಜಾಹೀರಾತಿಗಳ ಅನುಸಾರ ದರ್ಜೆ-3, ಮೇಲ್ವಿಚಾರಕ ಆಂತರಿಕ ಹಾಗೂ ನೇರ ನೇಮಕಾತಿ ಹುದ್ದೆಗಳ ಆನ್-ಲೈನ್ ಪರೀಕ್ಷೆಯನ್ನು ದಿನಾಂಕ:19-8-2017 ರಂದು ನಡೆಯುತ್ತಿದ್ದು, ಸದರಿ ಜಾಹೀರಾತಿಗೆ ಸ್ಪಂದಿಸಿರುವ ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ಪ್ರವೇಶ ಪತ್ರವನ್ನು ಸಂಸ್ಥೆಯ ವೆಬ್-ಸೈಟ್‌ನ ಮೂಲಕ ದಿನಾಂಕ:03-8-2017ರ ಅಪರಾಹ್ನದಿಂದ ಡೌನ್-ಲೋಡ್ ಮಾಡಿಕೊಳ್ಳತಕ್ಕದ್ದು.

ಸದರಿ ಜಾಹೀರಾತಿನನ್ವಯ ಈ ಹಿಂದೆ ಆನ್-ಲೈನ್ ಪರೀಕ್ಷೆ ರದ್ದಾಗಿದ್ದ ಕಾರಣ ಅಭ್ಯರ್ಥಿಗಳಿಗೆ ಉಂಟಾದ ಅನಾನುಕೂಲತೆಯನ್ನು ಸರಿಪಡಿಸಲು ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರ ನಿರ್ದೇಶನದ ಮೇರೆಗೆ ಅಭ್ಯರ್ಥಿಯ ವಿಳಾಸದಿಂದ ಪರೀಕ್ಷಾ ಕೇಂದ್ರಕ್ಕೆ ಹೋಗಿಬರಲು ಸಂಸ್ಥೆಯ ಸಾಮಾನ್ಯ ಸಾರಿಗೆ ವಾಹನಗಳಲ್ಲಿ ಉಚಿತ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಆದುದರಿಂದ ಅಭ್ಯರ್ಥಿಗಳು ದಿನಾಂಕ:19-8-2017 ರಂದು ನಡೆಯುವ ಸಾಮಾನ್ಯ ಸಾಮಾರ್ಥ್ಯ ಪರೀಕ್ಷೆಯ ಮೂಲ ಪ್ರವೇಶ ಪತ್ರವನ್ನು ಸರ್ಕಾರದಿಂದ ವಿತರಿಸಿರುವ ಯಾವುದಾದರೂ ಮೂಲ ಗುರುತಿನ ಚೀಟಿಯೊಂದಿಗೆ (ಉದಾ: ಮತದಾರರ ಗುರುತಿನ ಚೀಟಿ/ ಡ್ರೈವಿಂಗ್ ಲೈಸನ್ಸ್/ ಆಧಾರ್ ಕಾರ್ಡ್) ಸಂಸ್ಥೆಯ ವಾಹನಗಳಲ್ಲಿ ನಿರ್ವಾಹಕರಿಗೆ ತೋರಿಸಿ ಪ್ರಯಾಣಿಸಬಹುದೆಂದು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್-ಸೈಟ್ www.ksrtcjobs.com ಅನ್ನು ವೀಕ್ಷಿಸುವುದು.

-ಸಹಿ-

**ಅಧ್ಯಕ್ಷರು, ಆಯ್ಕೆ ಸಮಿತಿ**